**ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ತಿ.ನರಸೀಪುರ**
**ಅಸಲು ದಾವೆ ಸಂಖ್ಯೆ 210 /2025**

ವಾದಿಗಳು : ಶ್ರೀಮತಿ.ವಿಜಯ ಮತ್ತು ಇತರರು

ವಿರುದ್ಧ

ಪ್ರತಿವಾದಿಗಳು : ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು

NOTARY
GOVERNMENT OF KARNATAKA
LINGANNA. N.L.
M.A., LL.B.,
T. Narasipura
Revenue Taluk
R. No. Law-LCL/74/2022
Expiry Date: 3-3-2029

**<u>ಪ್ರಮಾಣ ಪತ್ರ</u>**

| | |
|---|---|
| ಹೆಸರು | – ಎನ್.ಗೌರಿಶಂಕರ್ |
| ತಂದೆಯ ಹೆಸರು | – ಲೇಟ್.ಎಂ.ಸಿ.ನಾಗರಾಜು |
| ವಯಸ್ಸು | – 46 ವರ್ಷ |
| ಉದ್ಯೋಗ | – ವ್ಯವಸಾಯ ಮತ್ತು ಪತ್ರಬರಹಗಾರರು |
| ವಾಸ | – ಟಿ.ನರಸೀಪುರ |

**<u>ಸಿವಿಲ್ ಪ್ರಕ್ರಿಯ ಸಂಹಿತೆ ಕ್ರಮಾದೇಶ 18 ನಿಯಮ 4 ರ ಅಡಿಯಲ್ಲಿ 4ನೇ ವಾದಿಯು ಸಲ್ಲಿಸುತ್ತಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ</u>**

1. ಎನ್.ಗೌರಿಶಂಕರ್ ಆದ ನಾನು ಸದರಿ ದಾವೆಯ 4ನೇ ವಾದಿಯಾಗಿದ್ದು. ನನಗೆ ಸದರಿ ದಾವೆಯ ಎಲ್ಲಾ ವಿಷಯಗಳು ತಿಳಿದಿರುತ್ತವೆ. ಆದ್ದರಿಂದ ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ,
2. ದಾವಾ ಷೆಡ್ಯೂಲ್ ಸ್ವತ್ತನ್ನು ದಿನಾಂಕ 27-09-1980 (ಇಪ್ಪತ್ತೇಳು ಸೆಪ್ಟೆಂಬರ್ ಸಾವಿರದ ಒಂಬೈನೂರು ಎಂಬತ್ತು) ರಂದು ಭೂ ನ್ಯಾಯ ಮಂಡಲಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರು 1ನೇ ವಾದಿಯ ಮಾವ ಮತ್ತು ನಮ್ಮಗಳ ತಾತ ಎನ್.ಮಾದಪ್ಪ ಬಿನ್.ನಿಂಗಪ್ಪರವರಿಗೆ 1 ಎಕರೆ 10 ಗುಂಟೆ ಜಮೀನಿನ ಗೇಣಿದಾರನೆಂದು ಗುರುತಿಸಿ ಮಂಜೂರಾತಿ ಮಾಡಿರುತ್ತಾರೆ. ತದ ನಂತರ ಎನ್.ಮಾದಪ್ಪ ಬಿನ್.ನಿಂಗಪ್ಪರವರ ಹೆಸರಿಗೆ ಎಂ.ಆರ್ ನಂ.13/1981-82ರಂತೆ ಪಹಣಿ ನಮೂದು ಆಗಿದ್ದು ವ್ಯವಸಾಯ ಮುಂದುವರೆಸಿಕೊಂಡು ಬರುತ್ತಿರುತ್ತಾರೆ. ಅವರ ಕಾಲಾನಂತರ ಎನ್.ಮಾದಪ್ಪ ಬಿನ್.ನಿಂಗಪ್ಪರವರ ಮಗನಾದ 1ನೇ ವಾದಿಯ ಗಂಡ ಮತ್ತು ನಮ್ಮಗಳ ತಂದೆ ಎಂ.ಸಿ.ನಾಗರಾಜುರವರು ಅವರ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಸಿಕೊಂಡು ಅನುಭವವಿಸಿಕೊಂಡು ಬರುತ್ತಿರುತ್ತೇವೆ.
3. ದಾವಾ ಷೆಡ್ಯೂಲ್ ಸ್ವತ್ತು ಸೇರಿದಂತೆ ಸರ್ವೆ ನಂಬರ್. 323 ರಲ್ಲಿ ಒಟ್ಟು 21 ಎಕರೆ 02 ಗುಂಟೆ ಜಮೀನು ಇದ್ದು, ಸದರಿ ಸರ್ವೆ ನಂಬರಿನ ಜಮೀನು ಅನೇಕ ಜನ ರೈತರಿಗೆ ಮಂಜೂರು ಆಗಿದ್ದು, ಮಂಜೂರು ಆದ ದಿನದಿಂದ ದುರಸ್ತು, ಪೋಡಿ ಆಗಿರುವುದಿಲ್ಲ. ಈ ಬಗ್ಗೆ ಹಲವಾರು ಬಾರಿ ಮೌಖಿಕವಾಗಿ ಕಂದಾಯ ಇಲಾಖೆಯವರನ್ನು ಕೇಳಿದಾಗ ಯಾವುದೇ ಪ್ರಯೋಜನ ಆಗಿರುವುದಿಲ್ಲ. ಆದ್ದರಿಂದ ನಮ್ಮ ತಂದೆ ಎಂ.ಸಿ.ನಾಗರಾಜುರವರು ದಿನಾಂಕ

ಮೈಸೂರು, ತಹಸಿಲ್ದಾರರು ತಿ.ನರಸೀಪುರ ತಿ.ನರಸೀಪುರ ತಾಲ್ಲೂಕು ಮತ್ತು ಸಹಾಯಕ ನಿರ್ದೇಶಕರು, ಭೂ ದಾಖಲೆಗಳ ವಿಭಾಗ, ತಿ.ನರಸೀಪುರ ತಾಲ್ಲೂಕು, ತಿ.ನರಸೀಪುರರವರಿಗೆ ಷೆಡ್ಯೂಲ್ ಸ್ವತ್ತನ್ನು ಏಕ ವ್ಯಕ್ತಿ ದುರಸ್ತು-ಪೋಡಿ-ಹದ್ದುಬಸ್ತು ಮಾಡಿಕೊಡಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

4. ನಮ್ಮ ತಂದೆ ಎಂ.ಸಿ.ನಾಗರಾಜುರವರು ದಿನಾಂಕ 08-10-2023(ಎಂಟು ಅಕ್ಟೋಬರ್ ಎರಡುಸಾವಿರದ ಇಪ್ಪತ್ತಮೂರು)ರಂದು ಮರಣ ಹೊಂದಿರುತ್ತಾರೆ. ನಾವುಗಳು ಮೇಲ್ಕಂಡ ಅರ್ಜಿಗಳ ಬಗ್ಗೆ 3ನೇ ಪ್ರತಿವಾದಿಯಾದ ಟಿ.ನರಸೀಪುರ ತಹಸಿಲ್ದಾರರನ್ನು ವಿಚಾರಣೆ ಮಾಡಿದಾಗ ದಿನಾಂಕ 05-06-2025(ಐದು ಜೂನ್ ಎರಡುಸಾವಿರದ ಇಪ್ಪತ್ತೈದು)ರಂದು ಎಂ.ಸಿ.ನಾಗರಾಜುರವರು ನೀಡಿರುವ ಅರ್ಜಿ ಸಂಬಂದ ಸದರಿ ಜಮೀನು ಕಂದಾಯ ದಾಖಲೆಗಳಂತೆ ಖರಾಬು ಕಟ್ಟೆ ಎಂದು ದಾಖಲಾಗಿರುತ್ತದೆ, ಸದರಿ ಖರಾಬು ಕಟ್ಟೆ ಜಮೀನಾಗಿದ್ದು ಭೂನ್ಯಾಯ ಮಂಡಲಿಯಲ್ಲಿ ಭೂ ಮಾಲೀಕರಾದ ಶ್ರೀ ಕೆ.ವಿ. ಸುಂದರಂ ಮತ್ತು ರಾಜಗೋಪಾಲಚಾರ್ ರವರಿಗೆ ಸದರಿ ಜಮೀನು ಮಂಜೂರಾತಿ ಆಗಿರುವುದಿಲ್ಲ. ಇವರಿಗೆ ಹಕ್ಕು ದಾಖಲಾಗದೆ ಇರುತ್ತದೆ. ಸದರಿ ಜಮೀನು ಭೂ ನ್ಯಾಯಮಂಡಲಿಯಲ್ಲಿ ಎನ್.ಮಾದಪ್ಪ ಬಿನ್ ನಿಂಗಪ್ಪರವರಿಗೆ ಎಂ.ಆರ್.ನಂ.13/1981-82 ರಂತೆ ಖಾತೆ ಆಗಿರುತ್ತದೆ. ಹಾಗೂ ಸದರಿ ಜಮೀನು ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲವೆಂಬ ಬಗ್ಗೆ ಸರ್ಕಾರದಿಂದ ಅಧಿಸೂಚನೆ ಹೊರಡಿಸಿರುವುದು ಕಂಡುಬಂದಿರುವುದಿಲ್ಲ, ಹಾಗೂ ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 108(ಐ)ರಡಿಯಲ್ಲಿ ಮಂಜೂರಿ ವಜಾ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು ಮೌಖಿಕ ಸೂಚನೆ ನೀಡಿರುತ್ತಾರೆ ಹಾಗೂ ಸದರಿ ನಿಮ್ಮ ಹೆಸರಿನಲ್ಲಿ ಇರುವ ಖಾತೆಯನ್ನು ರದ್ದುಪಡಿಸಿ ಸದರಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ನಿರ್ದೇಶನ ನೀಡಿರುತ್ತಾರೆ. ಹಾಗಾಗಿ ನೀವು ಕೋರಿರುವಂತೆ ಕ್ರಮವಹಿಸಲು ಅವಕಾಶ ಇರುವುದಿಲ್ಲವೆಂದು ತಿಳಿಯಪಡಿಸಿ ನಿಮ್ಮ ಮನವಿಯನ್ನು ವಿಲೇ ಇಟ್ಟಿದೆ ಎಂದು ಹಿಂಬರಹವನ್ನು ನೀಡಿರುತ್ತಾರೆ.

5. ದಾವಾ ಷೆಡ್ಯೂಲ್ ಸ್ವತ್ತು ಜಮೀನನ್ನು ಎಲ್.ಆರ್.ಎಫ್ ಸಂಖ್ಯೆ 4073/75-76ರಂತೆ ದಿನಾಂಕ 27-09-1980 (ಇಪ್ಪತ್ತೇಳು ಸೆಪ್ಟೆಂಬರ್ ಸಾವಿರದ ಒಂಬೈನೂರು ಎಂಬತ್ತು)ರಂದು ಭೂ ನ್ಯಾಯ ಮಂಡಲಿ, ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಎನ್.ಮಾದಪ್ಪ ಬಿನ್.ನಿಂಗಪ್ಪರವರಿಗೆ ಮಂಜೂರು ಮಾಡುವ ಸಮಯದಲ್ಲಿ ಎಲ್ಲಾ ರೀತಿಯ ಕಾನೂನು ನಡಾವಳಿಯ ಮೂಲಕ ಮಂಜೂರು ಮಾಡಲಾಗಿರುತ್ತದೆ.

6. ಷೆಡ್ಯೂಲ್ ಸ್ವತ್ತನ್ನು ಏಕ ವ್ಯಕ್ತಿ ದುರಸ್ತು-ಪೋಡಿ-ಹದ್ದುಬಸ್ತು ಮಾಡಿಕೊಡಬೇಕೆಂದು ಅರ್ಜಿಯ ವಿಷಯಕ್ಕೆ ಸಂಬಂದಿಸಿದಂತೆ ಗೌರವಾನ್ವಿತ ಉಪಲೋಕಾಯುಕ್ತ, ಬೆಂಗಳೂರು ಇವರಲ್ಲಿ COMPT/UPLOK/MYS/1238/2022 ಪ್ರಕರಣ ವಿಚಾರಣೆ ನಡೆದು ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವಸ್ತುಸ್ಥಿತಿಯನ್ನು ಪರಿಶೀಲಿಸಿ ಇದರ ಬಗ್ಗೆ ಸೂಕ್ತ ಕಾನೂನು ಕ್ರಮವನ್ನು ಕೈಗೊಂಡು ಸಾಧ್ಯವಾದಲ್ಲಿ ಸರ್ಕಾರಕ್ಕೆ ತಮ್ಮ ಒಂದು ವರದಿಯನ್ನು ಸಲ್ಲಿಸಲು ನಿರ್ದೇಶನ ನೀಡಿ ಪ್ರಕರಣವನ್ನು ದಿನಾಂಕ 01-08-2025ರಂದು ಮುಕ್ತಾಯಗೊಳಿಸಿರುತ್ತಾರೆ.

7. ದಾವಾ ಷೆಡ್ಯೂಲ್ ಸ್ವತ್ತನ್ನು ದಿನಾಂಕ 27-09-1980(ಇಪ್ಪತ್ತೇಳು ಸೆಪ್ಟೆಂಬರ್ ಸಾವಿರದ ಒಂಬೈನೂರು ಎಂಬತ್ತು) ರಂದು ಭೂ ನ್ಯಾಯ ಮಂಡಲಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಎನ್.ಮಾದಪ್ಪ ಬಿನ್.ನಿಂಗಪ್ಪರವರಿಗೆ 1 ಎಕರೆ 10 ಗುಂಟೆ ಜಮೀನಿನ ಗೇಣಿದಾರನೆಂದು ಗುರುತಿಸಿ ಮಂಜೂರಾತಿ ಮಾಡಿದ ದಿನಕ್ಕಿಂತ ಮುಂಚಿತವಾಗಿ ಸುಮಾರು 20 ವರ್ಷಗಳಿಂದ ಷೆಡ್ಯೂಲ್ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು, ಮಂಜೂರಾತಿ ಆದ ನಂತರ ಎನ್.ಮಾದಪ್ಪ ಬಿನ್.ನಿಂಗಪ್ಪರವರ ಹೆಸರಿಗೆ ಪಹಣಿಯಲ್ಲಿ ಹೆಸರನ್ನು ನಮೂದು ಆಗಿದ್ದು ವ್ಯವಸಾಯ ಮುಂದುವರೆಸಿಕೊಂಡು ಬರುತ್ತಿರುತ್ತಾರೆ. ಅವರ ಕಾಲಾನಂತರ ಎನ್.ಮಾದಪ್ಪ ಬಿನ್.ನಿಂಗಪ್ಪರವರ ಮಗ ಎಂ.ಸಿ.ನಾಗರಾಜುರವರು ಅವರ

NOTARY
LINGANNA. N.L.
M.A., LL.B.,
T. Narasipura
Revenue Taluk
R. No. Law-LCL/74/2022
Expiry Date: 3-3-2029
GOVERNMENT OF KARNATAKA

ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಸಿಕೊಂಡು ಅನುಭವವಿಸಿಕೊಂಡು ಬರುತ್ತಿರುತ್ತಾರೆ. ಎಂ.ಸಿ.ನಾಗರಾಜುರವರು ಕಾಲಾ ನಂತರ ಅವರ ಹೆಂಡತಿ ಮಕ್ಕಳಾದ ನಾವುಗಳು ವ್ಯವಸಾಯ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿರುತ್ತೇವೆ.

8. ದಾವಾ ಷೆಡ್ಯೂಲ್ ಸ್ವತ್ತನ್ನು ಕಾನೂನುಬದ್ದವಾಗಿಯೇ ಎನ್.ಮಾದಪ್ಪ ಬಿನ್.ನಿಂಗಪ್ಪರವರಿಗೆ ಎಲ್.ಆರ್.ಎಫ್ ಸಂಖ್ಯೆ 4073/75-76 ರಂತೆ ದಿನಾಂಕ 27-09-1980(ಇಪ್ಪತ್ತೇಳು ಸೆಪ್ಟೆಂಬರ್ ಸಾವಿರದ ಒಂಬೈನೂರು ಎಂಬತ್ತು)ರಂದು ಭೂ ನ್ಯಾಯ ಮಂಡಲಿ ತಿ.ನರಸೀಪುರ ತಾಲ್ಲೂಕು, ತಿ.ನರಸೀಪುರರವರು ಮಂಜೂರು ಮಾಡಿರುತ್ತಾರೆ. ದಾವಾ ಸ್ವತ್ತಿನ ಮೇಲೆ ವಾದಿಗಳು ಎಲ್ಲಾ ರೀತಿಯ ಹಕ್ಕು, ಹಿತಾಸಕ್ತಿ ಮತ್ತು ಮಾಲೀಕತ್ವವನ್ನು ಹೊಂದಿರುತ್ತಾರೆ. 3ನೇ ಪ್ರತಿವಾದಿಗಳು ನೀಡಿರುವ ಹಿಂಬರಹಕ್ಕೆ ಯಾವುದೇ ಕಾನೂನು ಮಾನ್ಯತೆ ಇರುವುದಿಲ್ಲ.

## ಪ್ರಾರ್ಥನೆ

ನಾವುಗಳು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರೆಂದು ಘೋಷಿಸುವಂತೆ, ಮತ್ತು ಪ್ರತಿವಾದಿಗಳಾಗಲಿ, ಅವರ ವಾರಸುದಾರರು, ಸಹಚರರು, ಸೇವಕರು, ಸಾಮಾನ್ಯ ಅಧಿಕಾರ ಪತ್ರ ಪಡೆದವರು ಯಾರು ಸಹ ನಮಗೆ ಸೇರಿದ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನ ಅನುಭೋಗಕ್ಕೆ ತೊಂದರೆ ನೀಡದಂತೆ ಪ್ರತಿವಾದಿಗಳನ್ನು ನಿರ್ಭಂದಿಸಿ ಶಾಶ್ವತ ತಡೆಯಾಜ್ಞೆ ನೀಡುವಂತೆ ದಾವೆಯನ್ನು ನಮ್ಮಗಳ ಪರವಾಗಿ ಮತ್ತು ಪ್ರತಿವಾದಿಗಳ ವಿರುದ್ದ ತೀರ್ಪು ಮತ್ತು ಡಿಕ್ರಿ ಮಾಡಬೇಕೆಂದು ಮತ್ತು ಇನ್ನಿತರ ಸನ್ನಿವೇಶಭರಿತ ಆದೇಶ ಮಾಡಬೇಕೆಂದು ಸ್ವಾಭಾವಿಕ ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪ್ರಾರ್ಥಿಸುತ್ತಾರೆ.

ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿವೆ ಎಂದು ಒಪ್ಪಿ ಈ ದಿನ ನನ್ನ ಸಹಿ ಮಾಡಿರುತ್ತೇನೆ.

ನನ್ನಿಂದ ಗುರುತಿಸಿದೆ

ವಕೀಲರು

NOTARY
LINGANNA. N.L.
M.A., LL.B.,
T. Narasipura
Revenue Taluk
R. No. Law-LCL/74/2022
Expiry Date: 3-3-2029
GOVERNMENT OF KARNATAKA

ಪ್ರಮಾಣಕಾರರು

Solemnly Affirmed & Declared
Before me on 17/6/2026

Notary, T. Narasipura

Document No.

No. of Correction .......

**ಸಾಕ್ಷಿಗೆ ದಿನಾಂಕಃ 17.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಕೆ.ಕೆ.ಎನ್. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ನೋಟರಿಯ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು, ಸರ್ವೆ ನಂ.323 ರ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.2 ಎಂದು, 4 ಫಸಲು ಪಹಣಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.3 ರಿಂದ ನಿ.ಪಿ.6 ಎಂದು, ಹಕ್ಕು ಬದಲಾವಣೆ ಪ್ರತಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.7 ಎಂದು, ಎಲ್.ಆರ್.ಎಸ್.ನಂ.75-76 ನೇ ಆದೇಶದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.8 ಎಂದು, Form No.10 ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.9 ಎಂದು, ದಿ.05.06.2025 ರಂದು ತಹಸೀಲ್ದಾರ್ ರವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.10 ಎಂದು, ಎಂ.ಸಿ.ನಾಗರಾಜು ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.11 ಎಂದು, ವಂಶವೃಕ್ಷ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.12 ಎಂದು, ದಿ.06.06.2025 ರ ಕಛೇರಿಯ ಲೀಗಲ್ ನೋಟಿಸನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು.

5 ಆರ್.ಪಿ.ಎ.ಡಿ. ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.14 ಎಂದು,5 ಆರ್.ಪಿ.ಎ.ಡಿ. ಸ್ವೀಕೃತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.15 ಎಂದು, ದಿ.24.02.2018 ರಂದು ತಹಸೀಲ್ದಾರ್ ರವರಿಗೆ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.16 ಎಂದು, ದಿ.24.02.2018 ರಂದು ಸಹಾಯಕ ನಿರ್ದೇಶಕರು ರವರಿಗೆ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.17 ಎಂದು, ದಿ.24.02.2018 ರಂದು ಜಿಲ್ಲಾಧಿಕಾರಿ ರವರಿಗೆ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು

17/6/26

ಹಾಜರುಪಡಿಸಿದ್ದು, ಅದನ್ನು ನಿ.ಪಿ.18 ಎಂದು, ಎಲ್.ಆರ್.ಎಸ್.ನಂ>.4075-76ರ ಭೂ ನ್ಯಾಯ ಮಂಡಳಿಯ ನಡವಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.19 ಎಂದು, ಸರ್ವೆ ನಂ.323ರ ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.20 ಎಂದು, ಎಂ.ಆರ್.ಸಂ.ಟಿ.4/2022-23ರ ಮ್ಯುಟೇಶನ್ ರಿಜಿಸ್ಟರ್ ಪ್ರತಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.21 ಎಂದು, ದಿ.07.08.2024ರ ತಹಸೀಲ್ದಾರ್ ರವರ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.22 ಎಂದು, ಭೂಮಾಪಕರ ನಿವೇದನೆ ಮತ್ತು ಹೇಳಿಕೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.23 ಎಂದು, ನಮೂನೆ-1ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.24 ಎಂದು, ನಮೂನೆ-3ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.25 ಎಂದು, ದಿ.03.09.2024ರಂದು ತಹಸೀಲ್ದಾರ್ ರವರಿಗೆ ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.26 ಎಂದು, ನಮೂನೆ-2, 4 ಮತ್ತು 5ರ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.27 ರಿಂದ ನಿ.ಪಿ.29 ಎಂದು, 6 ಫೋಟೋಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ.30 ಎಂದು, ಒಂದು ಪೆನ್ ಡ್ರೈವ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.31 ಎಂದು ಗುರುತಿಸಲಾಯಿತು.

(ಪ್ರತಿವಾದಿ ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಒ.

17/6/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**

ಬಗ್ಗೆ ಹಲವಾರು ಬಾರಿ ಮೌಖಿಕವಾಗಿ ಕಂದಾಯ ಇಲಾಖೆಯವರನ್ನು ಕೇಳಿದಾಗ ಯಾವುದೇ ಪ್ರಯೋಜನ ಆಗಿರುವುದಿಲ್ಲ. ಆದ್ದರಿಂದ ನಮ್ಮ ತಂದೆ ಎಂ.ಸಿ.ನಾಗರಾಜುರವರು ದಿನಾಂಕ 24/02/2018(ಇಪ್ಪತ್ತನಾಲ್ಕು ಫೆಬ್ರವರಿ ಎರಡುಸಾವಿರದ ಹದಿನೆಂಟು)ರಂದು